**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಸೂರಜ್ ರೇವಣ್ಣ, ಶ್ರೀ ಎಸ್. ಎಲ್. ಭೋಜೇಗೌಡ ಹಾಗೂ ಇತರರು ನಿಯಮ 330ರಡಿ ನೀಡಿರುವ ಸೂಚನೆಗೆ ಮಾಹಿತಿ**

**ಸೂಚನೆ:-**

ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕು ದಂಡಿಗಾನ ಹಳ್ಳಿ, ಹೋಬಳಿ, ಬಳದರೆ ಗ್ರಾಮದ ಸರ್ವೆ ನಂ 260ರ ಪೈಕಿ 2ಎಕರೆ 20 ಗುಂಟೆಯಲ್ಲಿ ರಾಷ್ಟ್ರೀಯ ಮತ್ತು ಜಿಲ್ಲಾ ರಸ್ತೆಯ ನಿಯಮಗಳನ್ನು ಉಲ್ಲಂಘಿಸಿ ಅನ್ಯಕಾಂತ (ಅನ್ಯ ಸಂಕ್ರಮಣ) ಪೂರ್ವದಲ್ಲಿ ರಸ್ತೆ ಮಾರ್ಜಿನಲ್ಲಿ ಕಟ್ಟಿರುವ ಅಕ್ರಮ ವಾಣಿಜ್ಯ ಕಟ್ಟಡವನ್ನು ಸಕ್ರಮಗೊಳಿಸಲು ಪೂರ್ವ ನಿಯೋಜಿತ ಅನ್ಯ ಮಾರ್ಗಗಳ ಮುಖಾಂತರ ವಾಣಿಜ್ಯ ಚಟುವಟಿಕೆ ನಡೆಸುವುದಲ್ಲದೇ ಇಂದನ ಇಲಾಖೆಯಿಂದ ಹೆಚ್.ಟಿ ಇನ್ಸ್ಟಾಲೇಷನ್ ಯೊಂದಿಗೆ ಹೋಟೆಲ್ ಗೆ ವಿದ್ಯುತ್ ಅನುಮತಿ ಪಡೆದು ಅಕ್ರಮವಾಗಿ /ಪರಿವೀಕ್ಷಕರ / ಸರ್ಕಾರದ ಯಾವುದೇ ಅನುಮತಿ ಪಡೆಯದೇ ಅಕ್ರಮವಾಗಿ ವಿದ್ಯುತ್ ಪೂರೈಕೆ ಮಾಡಿಕೊಂಡು ಸರ್ಕಾರಕ್ಕೆ ನಷ್ಟವನ್ನುಂಟು ಮಾಡುತ್ತಿದ್ದಾರೆ.

ಇದರಲ್ಲಿ ನೇರವಾಗಿ ಜಿಲ್ಲಾಧಿಕಾರಿಗಳು ಹಾಗೂ ಸಂಬಂಧಪಟ್ಟ ಉನ್ನತ ಅಧಿಕಾರಿಗಳು ಶಾಮೀಲಾಗಿ ಸರ್ಕಾರಕ್ಕೆ ನಷ್ಟ ಉಂಟು ಮಾಡಿದರೂ ಸಹ ಯಾವುದೇ ಕ್ರಮ ಜರುಗಿಸದೇ ಇರುವುದು ವಿಪರ್ಯಾಸವೇ ಸರಿ, ಉನ್ನತ ಅಧಿಕಾರಿಗಳೇ ಇಂತಹ ಕೃತ್ಯಗಳಲ್ಲಿ ಭಾಗವಹಿಸಿದ್ದಾರೆ ಎಂದು ಸಾರ್ವಜನಿಕ ವಲಯದಲ್ಲಿ ಚರ್ಚೆ ಶುರುವಾಗಿದೆ. ಇಂತಹ ಕೃತ್ಯಗಳಲ್ಲಿ ಭಾಗವಹಿಸಿ ಅಕ್ರಮವಾಗಿ / ನಿಯಮಗಳನ್ನು ಗಾಳಿಗೆ ತುರಿ ಗ್ರಾಮ ಪಂಚಾಯತಿಗೆ /ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟು ಮಾಡಿರುವ ಮತ್ತು ಮಾಡುತ್ತಿರುವ ಅಧಿಕಾರಿಗಳು/ವಾಣಿಜ್ಯ ಮಳಿಗೆಯ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸುವಂತೆ ಕೋರಿರುವ ಬಗ್ಗೆ.

**ಉತ್ತರ:-**

ಕರ್ನಾಟಕ ಭೂ ಕಂದಾಯ ಕಾಯ್ದೆ ಕಲಂ 95ಕ್ಕೆ 2019 ರಲ್ಲಿ ತರಲಾದ ತಿದ್ದುಪಡಿಯಂತೆ, ಅಫಿಡವಿಟ್ ಬೇಸ್ಡ್ ಆನ್‌ಲೈನ್ ತಂತ್ರಾಂಶದ ಮೂಲಕ ಭೂಪರಿವರ್ತನೆ ಪ್ರಕ್ರಿಯೆಯನ್ನು ನಿರ್ವಹಿಸಲಾಗುತ್ತಿದೆ. ಬಳದರೆ ಗ್ರಾಮದ ಸರ್ವೆ ನಂ. 260ಕ್ಕೆ ಸಂಬಂಧಿಸಿದಂತೆ, ಖಾತೆದಾರರು ಅಫಿಡವಿಟ್ ಸಂಖ್ಯೆ: 583119ರ ಮೂಲಕ ದಿ: 31/10/2022ರಂದು ಭೂಪರಿವರ್ತನೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಅರ್ಜಿಯ ಮೇರೆ ಸಂಬಂಧಪಟ್ಟ ತಾಲ್ಲೂಕಿನ ತಹಸೀಲ್ದಾರ್, ಚನ್ನರಾಯಪಟ್ಟಣ ಹಾಗೂ ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನ ಇಲಾಖ ರವರಿಂದ ವರದಿ ಪಡೆದಿದ್ದು, ಸದರಿಯವರ ಶಿಫಾರಸ್ಸಿನ ಮೇರೆ ಹಾಗೂ ತಹಸೀಲ್ದಾರ್, ಚನ್ನರಾಯಪಟ್ಟಣ ರವರು ತಮ್ಮ ವರದಿಯಲ್ಲಿ ಪ್ರಸ್ತಾಪಿತ ಪ್ರದೇಶದಲ್ಲಿ ಈಗಾಗಲೇ 47*53 ವಿಸ್ತೀರ್ಣದ ಕಟ್ಟಡವನ್ನು ಅನಧಿಕೃತವಾಗಿ ನಿರ್ಮಿಸಿರುವುದಾಗಿ ವರದಿ ಮಾಡಿದ್ದು, ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 107 ರಂತೆ ಕೃಷಿಯೇತರ ಉದ್ದೇಶಕ್ಕೆ ಬಳಸಿದ್ದಕ್ಕೆ ಅನ್ವಯವಾಗುವ ಭೂ ಪರಿವರ್ತನಾ ಶುಲ್ಕ ರೂ.54,450/-, ಪೋಡಿ ಶುಲ್ಕ ರೂ.55/- ಮತ್ತು ದಂಡ ಶುಲ್ಕ ರೂ. 3,990/- ಸೇರಿದಂತೆ ಒಟ್ಟು ರೂ.58495/-ನ್ನು ವಿಧಿಸಿ ಭೂ ಪರಿವರ್ತನೆಯನ್ನು ನೀಡಲಾಗಿರುತ್ತದೆ.

ರಸ್ತೆ ಮಾರ್ಜಿನ್ ಮತ್ತು ತೆರವುಗೊಳಿಸುವ ಕುರಿತು ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ನಿರ್ದೇಶನದಂತೆ (ಪತ್ರ ಸಂಖ್ಯೆ: ನಯೋಉನಿ-11: ಭೂ. ಅನ್ಯಕ್ರಾಂತ: 2005), ಹಾಲಿ ಇರುವ ಕಟ್ಟಡಗಳಿಗೆ ಕಂದಾಯ ಇಲಾಖೆಯು ನಿಯಮಾನುಸಾರ ದಂಡ ವಿಧಿಸಿ ಭೂ ಅನ್ಯಕ್ರಾಂತ ಮಂಜೂರಾತಿ ನೀಡಬಹುದಾಗಿದೆ. ಮುಂದೆ ರಸ್ತೆ ಅಭಿವೃದ್ಧಿ ಅಥವಾ ಅಗಲೀಕರಣದ ಸಂದರ್ಭದಲ್ಲಿ ರಸ್ತೆ ಮಾರ್ಜಿನ್‌ನಲ್ಲಿ ಬರುವ ಕಟ್ಟಡಗಳನ್ನು ಯಾವುದೇ ಕಾನೂನು ತೊಡಕಿಲ್ಲದೆ ತೆರವುಗೊಳಿಸಲು, ಜಮೀನಿನ ಮಾಲೀಕರಿಂದ ಮುಚ್ಚಳಿಕೆ ಪತ್ರವನ್ನು ಪಡೆಯಲಾಗಿರುತ್ತದೆ.

Scanned with OKEN Scanner

ಕಟ್ಟಡ ನಿರ್ಮಾಣಕ್ಕೆ ಅನುಮೋದನೆ ಅಥವಾ ಪರವಾನಗಿ ನೀಡುವುದು ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ರಸ್ತೆ ಮಾರ್ಜಿನಿನಲ್ಲಿ ಕಟ್ಟಡ ನಿರ್ಮಿಸಿರುವ ಕುರಿತಾದ ತಾಂತ್ರಿಕ ದಾಖಲಾತಿಗಳು ಕಂದಾಯ ಇಲಾಖೆಯಲ್ಲಿ ಲಭ್ಯವಿರುವುದಿಲ್ಲ. ಆದಾಗ್ಯೂ, ಸರ್ಕಾರದ ಅಧಿಸೂಚನೆ ಸಂಖ್ಯೆ: UDD 16 TTP 2023 (E), ದಿನಾಂಕ: 07-05-2025 ರ ಹೊಸ ನಿಯಮಾವಳಿಗಳ ಪ್ರಕಾರ, ಇಂತಹ ಪ್ರಕರಣಗಳಲ್ಲಿ ತಾಂತ್ರಿಕ ಅಭಿಪ್ರಾಯ ನೀಡುವ ಪ್ರಕ್ರಿಯೆಯನ್ನು ಪರಿಶೀಲಿಸಲಾಗುತ್ತಿದೆ.

ಆರ್‌ಡಿ 43 ಎಲ್‌ಜಿಹೆಚ್ 2026

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು

Scanned with OKEN Scanner